# ಬೈಸಿಕಲ್ ಬಾಸ್!






'ನಾನೇರುವ ಎತ್ತರಕೆ ನೀನೇರಬಲ್ಲೆಯಾ...' ಎಂಬ ಕುವೆಂಪು ಅವರ ಕವಿವಾಣಿಗೆ ಅನ್ವರ್ಥವಾಗಿದ್ದಾನೆ ಈ ಚಿತ್ರದಲ್ಲಿರುವ ವ್ಯಕ್ತಿ. ಇಷ್ಟು ಎತ್ತರದ ಸೈಕಲ್‌ನಲ್ಲಿ ಅದೆಷ್ಟು ಆರಾಮವಾಗಿ ಸಂಚರಿಸುತ್ತಿದ್ದಾನೆ! ಕ್ಯೂಬಾದ ಹವಾನಾ ನಗರಿಯಲ್ಲಿ ವಾಸವಾಗಿರುವ ಈತನ ಹೆಸರು ಫೆಲಿಕ್ಸ್ ಗ್ಯೂರೋಲ. ಇದು ಈತನೇ ತಯಾರಿಸಿದ ಸೈಕಲ್. ಎತ್ತರ ಬರೋಬ್ಬರಿ 18 ಅಡಿ!

1983ರಿಂದ ಈತ ಎತ್ತರದ ಸೈಕಲ್ ಓಡಿಸುವ ಹವ್ಯಾಸ ಬೆಳೆಸಿಕೊಂಡಿದ್ದಾನೆ. 'ಒಮ್ಮೆ ಟ್ಯಾಂಡಮ್ (ಒಂದರ ಹಿಂದೆ ಒಂದರಂತೆ ಆಸನ) ಸೈಕಲ್ ನೋಡಿದೆ; ಅದನ್ನೇ ಪ್ರೇರಣೆಯಾಗಿಟ್ಟುಕೊಂಡು ಈ ರೀತಿಯ ಸೈಕಲ್ ತಯಾರಿಸಿದೆ. ನನ್ನ ಮೊದಲ ಸೈಕಲ್ 5.3 ಅಡಿ ಉದ್ದವಿತ್ತು. ಐದು ವರ್ಷದ ನಂತರ ಅದು ತನ್ನ ಎತ್ತರವನ್ನು 18 ಅಡಿಗೆ ಹೆಚ್ಚಿಸಿಕೊಂಡಿದೆ' ಎಂದು ನಗುತ್ತಾನೆ.

ಹೀಗೆ ಸೈಕಲ್ ಓಡಿಸುತ್ತಾ ಈತ ರಸ್ತೆಗೆ ಇಳಿದರೆ ದಾರಿಹೋಕರು ಬೆರಗಿನಿಂದ ಮರೆಯಾಗುವವರೆಗೂ ನೋಡುತ್ತ ನಿಂತಿರುತ್ತಾರಂತೆ. ಪ್ರವಾಸಿಗರಂತೂ ಅದ್ಭುತವೆಂಬಂತೆ ಫೋಟೊ ಕ್ಲಿಕ್ಕಿಸಿಕೊಂಡು ಹೋಗುತ್ತಾರಂತೆ.

'ಇಷ್ಟು ಎತ್ತರದ ಸೈಕಲ್ ಓಡಿಸಲು ನಿಮಗೆ ಭಯವಾಗುವುದಿಲ್ಲವೇ' ಎಂದು ಕೇಳಿದರೆ, 'ಖಂಡಿತಾ ಇಲ್ಲ. ಚಿಕ್ಕಂದಿನಿಂದಲೂ ಬಹಳ ಧೈರ್ಯ ನನಗೆ. ಜೊತೆಗೆ ಅಥ್ಲೀಟ್ ನಾನು. ಜೂಡೋ, ಬಾಕ್ಸಿಂಗ್ ನನಗೆ ಅಚ್ಚುಮೆಚ್ಚು. ಇವೆಲ್ಲ ನನ್ನನ್ನು ಮಾನಸಿಕವಾಗಿ ಬಲಗೊಳಿಸಿದೆ. ಸೈಕಲ್ ಓಡಿಸುವಾಗ ರಸ್ತೆಯಲ್ಲಿ ಒಮ್ಮೆಯೂ ನಾನು ಧೈರ್ಯಗುಂದಿಲ್ಲ. ಬದಲಾಗಿ ಟ್ರಕ್ಕು, ಬಸ್ಸುಗಳನ್ನು ಹಿಂದಿಕ್ಕಿ ರಸ್ತೆಯಲ್ಲಿ ಹೋಗುವುದೇ ಒಂದು ರೀತಿಯ ಮಜಾ' ಎನ್ನುತ್ತಾನೆ 48 ವರ್ಷದ ಈ ಸಾಹಸಿ.

ಸೈಕಲ್ ಓಡಿಸುವಾಗ ಈತ ಹೆಲ್ಮೆಟ್ ಬಳಸುವುದಿಲ್ಲ. ಆದರೆ ಸೈಕಲ್ ಬೀಳದಂತೆ ಗೇರ್ ಮತ್ತು ಬ್ರೇಕ್‌ನ ಸುರಕ್ಷತೆ ಮಾಡಿಕೊಂಡಿದ್ದಾನೆ. ಹಾಗೆಯೇ ಟ್ರಾಫಿಕ್ ನಿಯಮವನ್ನು ತಪ್ಪದೆ ಪಾಲನೆ ಮಾಡುತ್ತಾನೆ.

ಈತನ ಎತ್ತರದ ಸೈಕಲ್ ಸವಾರಿಯ ಹಿಂದೆ ಸದುದ್ದೇಶವೊಂದಿದೆ. ಈತನಿಗಿದ್ದ ಒಬ್ಬಳೇ ತಂಗಿ ಅಂಗವೈಕಲ್ಯದಿಂದ ಬಳಲುತ್ತಿದ್ದು, ಎರಡು ವರ್ಷದ ಹಿಂದೆ ಬ್ರೇನ್ ಟ್ಯೂಮರ್‌ನಿಂದ ತೀರಿಕೊಂಡಳಂತೆ. 'ಆ ಸಮಯದಲ್ಲಿ ನನ್ನಲ್ಲಿ ಸಾಕಷ್ಟು ಹಣವಿರಲಿಲ್ಲ. ನನ್ನ ತಂಗಿಯ ಬಯಕೆ ಈಡೇರಿಸಲು ನನ್ನಿಂದ ಸಾಧ್ಯವಾಗಲಿಲ್ಲ. ಈಗ ನನ್ನ ಸವಾರಿಯನ್ನು ಕಂಡು ಜನರು ನೀಡುವ ಹಣವನ್ನು ಉಳಿಸಿ ಅಂಗವಿಕಲ ಮಕ್ಕಳಿಗೆ ದಾನವಾಗಿ ನೀಡುವ ಬಯಕೆ ಇದೆ' ಎನ್ನುತ್ತಾನೆ ಈತ.

ಅಂದ ಹಾಗೆ, ಈತ ಸೈಕಲ್ ಮೋಹದಿಂದಾಗಿ ಇದ್ದ ಒಂದು ಮನೆಯನ್ನೂ ಮಾರಿ ಸೈಕಲ್‌ನ ಬಿಡಿ ಭಾಗಗಳನ್ನು ಖರೀದಿಸಿದ್ದಾನೆ. ಭವಿಷ್ಯದಲ್ಲಿ 26 ಅಡಿ ಎತ್ತರದ ಸೈಕಲನ್ನು ತಯಾರಿಸುವ ಯೋಜನೆ ಹೊಂದಿರುವ ಈತನಿಗೆ ಆ ಮೂಲಕ ವಿಶ್ವದಾಖಲೆಯನ್ನೂ ಮುಡಿಗೇರಿಸಿಕೊಳ್ಳುವ ಹಂಬಲವೂ ಇದೆಯಂತೆ.

■ ವಿದ್ಯಾಶ್ರೀ ಎಸ್.